**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| ಓ.ಎಸ್. ನಂ | **196/2013** |
| ಪಿ.ಡಬ್ಲ್ಯೂ | **01** |
| ದಿನಾಂಕ | **20.07.2023** |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಕೆ ಎನ್ ಎಸ್ ಪ್ರತಿವಾದಿಯ ಪರ ವಕೀಲರಿಂದ.**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಮ್ಮ ಆಸ್ತಿಗೆ ಪ್ರತಿವಾದಿಗಳು ತೊಂದರೆ ನೀಡುತ್ತಿರುವ ಕಾರಣ ಪ್ರಸ್ತುತ ದಾವೆಯನ್ನು ನಾನು ಹೂಡಿರುತ್ತೇನೆ. ದಾವಾ ಅನುಸೂಚಿ ಸ್ವತ್ತಿನ ಸರ್ವೆ ನಂ 83/7 ಆಗಿರುತ್ತದೆ. ಸದರಿ ಸ್ವತ್ತು ಕೃಷಿ ಜಮೀನು ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಗ್ರಾಮ ಠಾಣ ಸ್ವತ್ತು ಎಂದು ನುಡಿದಿರುತ್ತಾರೆ. ಸದರಿ ಸ್ವತ್ತು ಭೂ ಪರಿವರ್ತನೆ ಆಗಿರುವುದಿಲ್ಲ.

ಸದರಿ ಸ್ವತ್ತು ಗ್ರಾಮ ಠಾಣ ಸ್ವತ್ತು ಎಂದು ತಹಸಿಲ್ದಾರವರು ಆದೇಶ ಮಾಡಿರುತ್ತಾರೆ, ಆದೇಶದ ಪ್ರತಿಯನ್ನು ನಾನು ನ್ಯಾಯಲಾಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಸ್ವತ್ತಿನಲ್ಲಿ ಪಂಚಾಯತಿಯವರು ರಸ್ತೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ರಸ್ತೆಗಾಗಿ ನಾವೇ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ನಾವು ರಸ್ತೆಗಾಗಿ ಆಸ್ತಿಯನ್ನು ನೀಡಿರುವುದಕ್ಕೆ ದಾಖಲಾತಿ ಇಲ್ಲ ಎಂದರೆ ಸರಿಯಲ್ಲ. ನಾನು ರಸ್ತೆಗಾಗಿ ಆಸ್ತೆಯನ್ನು ಬಿಟ್ಟುಕೊಡಲು ರಸ್ತೆಯ ಮಾಲೀಕಳಾಗಿರಲಿಲ್ಲ ಹಾಗಾಗಿ ರಸ್ತೆಗಾಗಿ ಬಿಟ್ಟು ಕೊಡುವ ಪ್ರಮೇಯ ಇರಲಿಲ್ಲ ಎಂದರೆ ಸರಿ.

ಮೂಲತಃ ಸರ್ವೆ ನಂ 83/7 ರ ಒಟ್ಟಾರೆ ವಿಸ್ತೀರ್ಣವು 7 ಗುಂಟೆ ಎಂದರೆ ಸಾಕ್ಷಿಯು 5 ಗುಂಟೆ ಎಂದು ನುಡಿದಿರುತ್ತಾರೆ. ಪಹಣಿಯಲ್ಲಿ ಸಹ 7 ಗುಂಟೆ ಆಸ್ತಿ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತನ್ನು ನನ್ನ ಅಣ್ಣನಾದ ಬೆಟ್ಟಪ್ಪ ಖರೀದಿಸಿರುತ್ತಾರೆ. ಬೆಟ್ಟಪ್ಪ ನವರ ತಂದೆಯ ಹೆಸರು ಹೊನ್ನಪ್ಪ ಎಂದರೆ ಸರಿ. ಗೊವಿಂದಪ್ಪ ರವರ ಮಗನಾದ ಬೆಟ್ಟಪ್ಪ ರವರಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಬೆಟ್ಟಪ್ಪ ನವರು ನನ್ನ ಸಹೋದರ

ಮಾವನಾಗಿರುತ್ತಾರೆ ಎಂದು ನುಡಿಯುತ್ತಾರೆ. ಗೋವಿಂದಪ್ಪ ರ ಮಗನಾದ ಬೆಟ್ಟಪ್ಪನವರಿಗೆ ಮಕ್ಕಳು ಇರಲಿಲ್ಲ. ಅವರ ಮರಣಾ ನಂತರ ನಾವು ಉತ್ತರಾಧಿಕಾರ ಪತ್ರವನ್ನು ಪಡೆದಿರುವುದಿಲ್ಲ. ಗೋವಿಂದಪ್ಪ ರವರ ಮಗನಾದ ಬೆಟ್ಟಪ್ಪ ರವರ ಮರಣ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಗೋವಿಂದಪ್ಪ ರವರ ಮಗನಾದ ಬೆಟ್ಟಪ್ಪ ಯಾವಾಗ ನಿಧನರಾದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಗೋವಿಂದಪ್ಪ ರವರ ಪತ್ನಿ ಹೆಸರು ನಾಗಮ್ಮ, ಅವರು ಪ್ರಸ್ತುತ ನಿಧನರಾಗಿರುತ್ತಾರೆ. ಗೋವಿಂದಪ್ಪ ರವರಿಗೆ ಬೆಟ್ಟಪ್ಪನವರು ಏಕ ಮಾತ್ರ ಪುತ್ರರಾಗಿದ್ದರು.

ಸರ್ವೆ 83/7 ರ ಆಸ್ತಿಯ ಖಾತೆಯು ಪ್ರಸ್ತುತ ಬೆಟ್ಟಪ್ಪ ಬಿನ್ ಗೋವಿಂದಪ್ಪ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಪಹಣಿಯಲ್ಲಿಯೂ 4 ಗುಂಟೆ ಆಸ್ತಿಯು ಸದರಿಯವರ ಹೆಸರು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಬೆಟ್ಟಪ್ಪ ಬಿನ್ ಗೋವಿಂದಪ್ಪ ರವರು ಆಸ್ತಿಯನ್ನು 1995 ರ ಸಾಲಿನಲ್ಲಿ ಖರೀದಿಸಿರುತ್ತಾರೆ. ಸದರಿ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ವಿಸ್ತೀರ್ಣದಲ್ಲಿ ಗಜ ಲೆಕ್ಕದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಪೂರ್ವ ಪಶ್ಚಿಮ 30 ಗಜ, ಉತ್ತರ ದಕ್ಷಿಣ 18 ಗಜ ಎಂದು ಸದರಿ ಕ್ರಯ ಪತ್ರದಲ್ಲಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಗುಂಟೆ ಲೆಕ್ಕದಲ್ಲಿ ಅಳತೆ ಮಾಡಿದರೆ 4 ಗುಂಟೆ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದಲ್ಲಿ ಕುಷ್ಕಿ ಜಮೀನು ಎಂದು ನಮೂದಗಿದೆ ಆದರೆ ಗ್ರಾಮ ಠಾಣ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ.

ನಿಪಿ 1 ರಲ್ಲಿ ಹುಣಸೆ ಹಣ್ಣಿನ ಮರ ಇರುವುದಾಗಿ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳ ಪರಿಚಯ ಇರುವುದಿಲ್ಲ. ದಿನಾಂಕ 14.01.1980 ರಂದು ಪ್ರತಿವಾದಿಗಳ ತಂದೆ ದಾವಾ ಅನುಸೂಚಿ ಸ್ವತ್ತಿನ 3 ಗುಂಟೆ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದ ಅನ್ವಯ ಕೆ ಪಿ ಮುನಿಯಪ್ಪ ರವರ ಹೆಸರಿಗೆ ಸದರಿ ಆಸ್ತಿಯ ಖಾತೆಯು ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದಲ್ಲಿ ಆಸ್ತಿಯಲ್ಲಿ 3 ಹುಣಸೆ ಹಣ್ಣಿನ ಮರಗಳು ಇದೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನನ್ನ ಆಸ್ತಿಯಲ್ಲಿ ಹುಣಸೆ ಹಣ್ಣಿನ ಮರಗಳು ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಮರಗಳು ಪ್ರತಿವಾದಿಗಳ ಆಸ್ತಿಯಲ್ಲಿ ಇರುತ್ತದೆ ಅವುಗಳನ್ನು ಲಪಾಟಾಯಿಸುವ ಉದ್ದೇಶದಿಂದ ನಮ್ಮ ಆಸ್ತಿಯಲ್ಲಿ ಅವುಗಳು ಇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಸ್ತೆಯು ಪ್ರತಿವಾಗಳ ಆಸ್ತಿಯಲ್ಲಿ ಹಾದು ಹೋಗಿರುತ್ತದೆ ನನ್ನ ಆಸ್ತಿಯಲ್ಲಿ ಅಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಪ್ರತಿವಾದಿಗಳು ಪಂಚಾಯಿತಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಮುನಿಯಪ್ಪ ರವರ ಮರಣ ನಂತರ ಅವರ ಮಕ್ಕಳು 3 ಗುಂಟೆ ಆಸ್ತಿಯ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 14.01.1980 ರ ಕ್ರಯ ಪತ್ರವನ್ನು ನಾವು ಆಗಲಿ ಅಥವಾ ಬೆಟ್ಟಪ್ಪ ಬಿನ್ ಗೋವಿಂದಪ್ಪ ರವರಾಗಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಅಂತೆಯೇ ಖಾತೆಯನ್ನು ಸಹ ರೆವಿನ್ಯೂ ದಾಖಲಾತಿಗಳನ್ನಾಗಲಿ ಪ್ರಶ್ನಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾಗಳು 1980 ನೇ ಸಾಲಿನಿಂದ 3 ಗುಂಟೆ ಆಸ್ತಿಯು ಸ್ವಾಧೀನಾನುಭವದಲ್ಲಿ ಇರುವ ಕಾರಣ ನಾವು ಖಾತೆಯನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

**ಓ.ಹೇ.ಕೇ. ಸರಿ ಇದೆ.**

Sd/-
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**